**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 521/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ | ಪ್ರಾಸಾಃ 3 |
| ತಂದೆಯ/ಗಂಡನ ಹೆಸರು | : | ರಾಜಪ್ಪ | ಚಾಸಾಃ 4 |
| ವಯಸ್ಸು | : | 29 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಆರ್.ಗೊಲ್ಲರಹಳ್ಳಿ ಗ್ರಾಮ | ದಿಃ16.04.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಚಾಸಾ.1 ನನ್ನ ಚಿಕ್ಕಪ್ಪ. ಚಾಸಾ.5 ಮತ್ತು 6 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

2. ದಿ.07.08.2023 ರಂದು ನಾನು ಮತ್ತು ನನ್ನ ಚಿಕ್ಕಪ್ಪನಾದ ಚಾಸಾ.1 ರವರು ಆರ್.ಗೊಲ್ಲರಹಟ್ಟಿ ಗ್ರಾಮದ ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆವು. 1 ನೇ ಆರೋಪಿತನೊಂದಿಗೆ ನ್ಯಾಯಾಲಯದ ಮುಂದಿರುವ ಆರೋಪಿತರು ಮತ್ತು 9 ನೇ ಆರೋಪಿ ಸೇರಿಕೊಂಡು ದಾರಿ ಬಿಡಿ ಎಂದು ನಮ್ಮ ಮೇಲೆ ಗಲಾಟೆ ಮಾಡಿದರು. ಎಲ್ಲಾ ಆರೋಪಿತರು ನನಗೆ ಮತ್ತು ಚಾಸಾ.1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ವಿದ್ಯುತ್ ಪರಿವರ್ತಕವನ್ನು ತೆಗೆಯದಿದ್ದಲ್ಲಿ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು. 3 ನೇ ಆರೋಪಿ ಎಡೆಮಟ್ಟೆಯನ್ನು ತೆಗೆದುಕೊಂಡು ಚಾಸಾ.1 ರವರಿಗೆ ಮತ್ತು ನನಗೆ ಬೆನ್ನಿಗೆ ಮತ್ತು ಕಾಲಿಗೆ ಹೊಡೆದಿರುತ್ತಾರೆ. ಎಲ್ಲಾ ಆರೋಪಿತರು ಕಲ್ಲುಗಳನ್ನು ತೆಗೆದುಕೊಂಡು ಬಂದು ನಮಗೆ ಬೆದರಿಕೆ ಹಾಕಿರುತ್ತಾರೆ. ಚಾಸಾ.5 ಮತ್ತು 6 ರವರು ಗಲಾಟೆಯನ್ನು ಬಿಡಿಸಿರುತ್ತಾರೆ. ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ನ್ಯಾಯಾಲಯದ ಮುಂದಿರುವ ಮು.ಮಾ.1 ರ ಎಡೆಮಟ್ಟೆಯನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ.ಓ.ಎಂ. ವಕೀಲರಿಂದ**

3. ದಿನಾಂಕ 07.08.2023 ರಂದು ಸಂಜೆ 6 ಗಂಟೆಗೆ ನಾನು ಮತ್ತು ಚಾಸಾ.1 ರವರು ನಮ್ಮ ಜಮೀನಿನಲ್ಲಿ ಇದ್ದೆವು. ಸದರಿ ಜಮೀನು ಚಾಸಾ.1 ರವರ ಪತ್ನಿಯ

ಕುಟುಂಬಕ್ಕೆ ಸೇರಿದ್ದು. ಸದರಿ ಜಮೀನು ನಮಗೆ ಸೇರಿದ್ದಲ್ಲ. 40 ವರ್ಷಗಳಿಂದ ನಾವೆ ಸದರಿ ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿದ್ದೇವೆ. ಸದರಿ ಜಮೀನಿನ ಸರ್ವೆ ನಂ.8. ಸದರಿ ಜಮೀನಿನಲ್ಲಿ ಚಾಸಾ.1 ರವರು ವಿದ್ಯುತ್ ಪರಿವರ್ತಕವನ್ನು ಅಳವಡಿಸಿ ಕಲ್ಲು ತಂತಿಯನ್ನು ಅಳವಡಿಸಿದ್ದಾರೆ ಎಂದರೆ ಸರಿ. ಸದರಿ ವಿದ್ಯುತ್ ಪರಿವರ್ತಕವನ್ನು ಮತ್ತು ಕಲ್ಲು ಕಂಬವನ್ನು ತೆರವುಗೊಳಿಸುವಂತೆ 3 ನೇ ಆರೋಪಿ ತಹಶೀಲ್ದಾರ್, ಹೊಳಲ್ಕೆರೆರವರಿಗೆ ಮನವಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ನೇ ಆರೋಪಿ ತಹಶೀಲ್ದಾರ್‌ರವರಿಗೆ ಕಲ್ಲು ಕಂಬವನ್ನು ತೆರವುಗೊಳಿಸುವಂತೆ ನಿವೇದನೆಯನ್ನು ನೀಡಿದ್ದರು ಎಂದರೆ ಸರಿ. ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ರವರಿಗೆ ಹಾಗೂ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ರವರಿಗೂ ನಿವೇದನೆಯನ್ನು ನೀಡಿದ್ದರು ಎಂದರೆ ಗೊತ್ತಿಲ್ಲ. ಸದರಿ ನಿವೇದನೆಯ ಕುರಿತು ದಿನಾಂಕ 07.08.2023 ರಂದು ತಹಶೀಲ್ದಾರ್, ಹೊಳಲ್ಕೆರೆರವರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ತಹಶೀಲ್ದಾರ್‌ರವರು ಪೊಲೀಸರೊಂದಿಗೆ ಸಂಜೆ 6 ಗಂಟೆಗೆ ಸ್ಥಳಕ್ಕೆ ಬಂದಿದ್ದರು. ತಹಶೀಲ್ದಾರ್‌ರವರು ಪೊಲೀಸರೊಂದಿಗೆ ಮದ್ಯಾಹ್ನ 3.30 ಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ತಹಶೀಲ್ದಾರ್‌ರವರು ಬಂದಿದ್ದರಿಂದ ಆರೋಪಿತರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ.1 ಮತ್ತು ನಾವು ಅಳತೆ ಮಾಡಬೇಡಿ ಎಂದು ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಎರಡು ಛಾಯಾಚಿತ್ರಗಳನ್ನು ತೋರಿಸಿ, ಸದರಿ ಛಾಯಾಚಿತ್ರಗಳಲ್ಲಿ ಚಾಸಾ.1 ರವರು ಕೋಲನ್ನು ಮತ್ತು ಕಲ್ಲನ್ನು ಹಿಡಿದುಕೊಂಡಿದ್ದಾರೆ ಎಂದು ಕೇಳಲಾಗಿ, ಸಾಕ್ಷಿ ಹೌದು ಎಂದು ಹೇಳಿ, ಸದರಿ ಛಾಯಾಚಿತ್ರಗಳನ್ನು ಸೃಷ್ಟಿಸಬಹುದು ಎಂದು ಹೇಳುತ್ತಾರೆ. ಹಾಗಾಗಿ ಸಾಕ್ಷಿಗೆ ತೋರಿಸಲಾದ ಛಾಯಾಚಿತ್ರಗಳನ್ನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ)ರಡಿಯಲ್ಲಿ ರುಜುವಾತುಪಡಿಸುವ ನಿಬಂಧನೆಗೆ ಒಳಪಟ್ಟು ನಿಡಿ.1 ಮತ್ತು 2 ಎಂದು ಗುರುತಿಸಲಾಯಿತು. ಸದರಿ ಛಾಯಾಚಿತ್ರಗಳಲ್ಲಿ 1 ಮತ್ತು 3 ನೇ ಆರೋಪಿತರು ಇದ್ದಾರೆ ಎಂದರೆ ಸಾಕ್ಷಿ 3 ನೇ ಆರೋಪಿ ಮಾತ್ರ ಇದ್ದಾರೆ ಎಂದು ಹೇಳುತ್ತಾರೆ. ನಾವೆ ಆರೋಪಿತರ ಮೇಲೆ ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ಚಾಸಾ.1 ರವರಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರ ಎಡೆಮಟ್ಟೆ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ.

4. ತಹಶೀಲ್ದಾರ್‌ರವರು ಇದ್ದಾಗಲೆ ಗಲಾಟೆ ಆಗಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ಪೊಲೀಸರು ಮತ್ತು ತಹಶೀಲ್ದಾರ್ ಕಛೇರಿರವರು ಸಹ ಇದ್ದರು ಎಂದರೆ ಸರಿ. ತಹಶೀಲ್ದಾರ್ ಕಛೇರಿರವರು ಮತ್ತು ಪೊಲೀಸರು ಬಿಡಿಸಲು ಬಂದಿಲ್ಲ. ಚಾಸಾ.5 ಮತ್ತು 6 ರವರು ಗಲಾಟೆಯನ್ನು ಬಿಡಿಸಿರುತ್ತಾರೆ. ಚಾಸಾ.6 ನನ್ನ ಅತ್ತೆಯ ಮಗ. ಚಾಸಾ.5 ನನ್ನ ಸಂಬಂಧಿಕರಲ್ಲ. ಚಾಸಾ.6 ರವರು ಸಂಜೆ 6 ರಿಂದ 6.30 ಕ್ಕೆ ಗಲಾಟೆ ನಡೆಯುವಾಗ

ಬಂದರು. ನಾನು ತನಿಖಾಧಿಕಾರಿಗೆ ಆಸ್ಪತ್ರೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸಹಿಯನ್ನು ಸಹ ಅಲ್ಲಿಯೇ ಮಾಡಿರುತ್ತೇನೆ. ಪೊಲೀಸರು 8 ರಿಂದ 8.30 ರ ಸಮಯದಲ್ಲಿ ಬಂದಿದ್ದರು. ಪೊಲೀಸರು ಆಸ್ಪತ್ರೆಗೆ ಗಣಕಯಂತ್ರವನ್ನು ಮತ್ತು ಪ್ರಿಂಟರ್‌ನ್ನು ತಂದಿರಲಿಲ್ಲ. ನಾವೆ ಆರೋಪಿತರ ಮೇಲೆ ಗಲಾಟೆ ಮಾಡಿದ್ದೆವು ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ದೂರನ್ನು ನೀಡಲು ಪೊಲೀಸ್ ಠಾಣೆಗೆ ಬಂದಿದ್ದರು ಎಂದರೆ ಸರಿ. ಸಂಜೆ 6 ಗಂಟೆಗೆ ಗಲಾಟೆ ಆಗಿದ್ದು, ಆ ನಂತರ ಪೊಲೀಸ್ ಠಾಣೆಗೆ ಬಂದಿರುತ್ತಾರೆ. ಆರೋಪಿತರು ನಮ್ಮ ವಿರುದ್ಧ ದೂರು ನೀಡಲು ಹೋದ ಕಾರಣ ನಾವು ಆರೋಪಿತರ ವಿರುದ್ಧ ಚಾಸಾ.6 ರವರನ್ನು ಕರೆಸಿಕೊಂಡು ಸುಳ್ಳು ದೂರನ್ನು ನೀಡುವ ಸಲುವಾಗಿ ಆಸ್ಪತ್ರೆಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ತಹಶೀಲ್ದಾರ್‌ರವರು ಬರುವಂತೆ ಹೇಳಿದ್ದರಿಂದ ಆರೋಪಿತರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ಗಲಾಟೆ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ತುಂಬಾ ಜನ ಇದ್ದ ಕಾರಣ ನನಗೆ ಯಾರು ಹೊಡೆದರು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ದಾರಿಯ ವಿಚಾರದ ಕುರಿತು ಬಂದಿದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ಓಡಾಡದಂತೆ ತಡೆ ಮಾಡಿ, ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ದಾರಿಯ ವಿಚಾರದ ಕುರಿತು ನಮ್ಮ ಮತ್ತು ಆರೋಪಿತರ ನಡುವೆ ಆಗಾಗ ಗಲಾಟೆ ನಡೆಯುತ್ತಿತ್ತು. ಸದರಿ ವಿಚಾರದ ಕುರಿತು ನಮಗೆ ಆರೋಪಿತರ ವಿರುದ್ಧ ದ್ವೇಷ ಇತ್ತು ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದಿದ್ದಾಗ್ಯೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ